ಹಿರಿಯ ದಿವಾಣಿ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಲಯ, ಕುಂದಗೋಳ

**ಸಿ.ಸಿ. ನಂ. 16/2021 ಸಿ. ಡಬ್ಲ್ಯೂ: 10 ಪಿ ಡಬ್ಲ್ಯೂ : 9**

ಸಾಕ್ಷಿಯ ಹೆಸರು : ವಲ್ಲಭ ಪಾಟೀಲ

ತಂದೆಯ ಹೆಸರು : ವೆಂಕಟೇಶರಾವ್

ವಯಸ್ಸು : 71 ವರ್ಷ

ಉದ್ಯೋಗ : ನಿವೃತ್ತ ಕೆ ವಿ ಜಿ ಬ್ಯಾಂಕ್ ನೌಕರ.

ವಾಸಸ್ಥಳ : ರಾಮದುರ್ಗ.

ದಿನಾಂಕ: 07/08/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆ: ಸಸಅ ರವರಿಂದ

1. ಚಾಸಾ 1 ಮತ್ತು 4 ರ ಪರಿಚಯವಿಲ್ಲ. ಆರೋಪಿಯ ಪರಿಚಯವಿದೆ. ನಾನು 2011 ರಿಂದ 2015 ರ ವರೆಗೆ ಯರೇಬೂದಿಹಾಳ ಗ್ರಾಮದ ಕೆ ವಿ ಜಿ ಬ್ಯಾಂಕನಲ್ಲಿ ಅಧಿಕಾರಿಯಾಗಿ ಕೆಲಸ ಮಾಡಿದ್ದೇನೆ. ನಾನು ಸದರಿ ಶಾಖೆಗೆ ಕೆಲಸಕ್ಕೆ ಹಾಜರಾದಾಗಲೇ ಆರೋಪಿಯು ಸದರಿ ಬ್ಯಾಂಕನ ಶಾಖಾ ವ್ಯವಸ್ಥಾಪಕನಾಗಿ ಕೆಲಸ ಮಾಡುತ್ತಿದ್ದನು. 2013 ರ ವರೆಗೂ ಶಾಖಾ ಪ್ರಬಂಧಕರು ಎಂದು ಆರೋಪಿ ಕೆಲಸ ಮಾಡಿರುತ್ತಾರೆ. ದಿ: 08-05-2013 ರಂದು ದುಂಡಸಿ ಶಾಖೆಗೆ ಆರೋಪಿಗೆ ವರ್ಗಾವಣೆ ಆಗಿ ಅಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಯರೇಬೂದಿಹಾಳ ಶಾಖೆಯಿಂದ ದುಂಡಸಿ ಶಾಖೆಗೆ ಹೋಗುವಾಗ ದಿ: 27-05-2013 ರಂದು ನನ್ನ ಕಡೆಗೆ ಕಚೇರಿ ಆದೇಶದ ಪ್ರಕಾರ ಯರೇಬೂದಿಹಾಳ ಬ್ಯಾಂಕಿನ ಚಾರ್ಜನ್ನು ವಹಿಸಿಕೊಟ್ಟಿದ್ದಲ್ಲದೇ ಬ್ಯಾಂಕಿನ ಕೀ ಗಳನ್ನು ಕೊಟ್ಟು ಹೋಗಿದ್ದರು. ಪಿ ಕೆ ಖಾನಾಪೂರ ಅನ್ನುವವರನ್ನು ಯರೇಬೂದಿಹಾಳ ಬ್ಯಾಂಕಿನ ಶಾಖಾ ವ್ಯವಸ್ಥಾಪಕರು ಎಂದು ಮೇಲಾದಿಕಾರಿಗಳಿಂದು ನೇಮಿಸಿದ್ದರಿಂದ ದಿ: 19-08-2013 ರಂದು ಬ್ಯಾಂಕಿನ ಚಾರ್ಜನ್ನು ವಹಿಸಿ ಕೊಟ್ಟಿರುತ್ತೇನೆ. ನಾನು ಆರೋಪಿಯ ಕಡೆಯಿಂದ ಚಾರ್ಜ ವಹಿಸಿಕೊಂಡಾಗ ಚಾರ್ಜ ಲಿಸ್ಟ ತಯಾರಿಸಿರುವುದಿಲ್ಲ. ಸದರಿ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿರುವಾಗ ಚಾಸಾ 10 ಅವರು ಕಚೇರಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದರು. 2014 ನೇ ಇಸ್ವೀಯಲ್ಲಿ ಡಿ ವಿ ಪ್ರಸಾದ ಹೆಗಡೆ ಎಂಬುವವರು ನಮ್ಮ ಬ್ಯಾಂಕಿನ ರೆಗ್ಯೂಲರ್ ತಪಾಸಣೆ ಮಾಡಿದ್ದು ಆ ವೇಳೆಯಲ್ಲಿ ಯರೇಬೂದಿಹಾಳ ಶಾಖೆಯಲ್ಲಿ ಪಿ ಕೆ ಖಾನಾಪೂರ ಬ್ರಾಂಚ್ ಮ್ಯಾನೇಜರಾಗಿದ್ದರು. ನಾನು ಸದರಿ ಶಾಖೆಯಲ್ಲಿ ಅಧಿಕಾರಿ ಅಂತ ಕೆಲಸ ಮಾಡಿದ ಸಮಯದಲ್ಲಿ ಆರೋಪಿ ಹೇಳಿದ ಪ್ರಕಾರ ಚಕ್ ಗಳು

ಬಂದಾಗ ಅವುಗಳನ್ನು ಪರೀಶೀಲಿಸಿ ಹಣ ಕೊಡಲು ಕ್ಯಾಶಿಯರಗೆ ಹೇಳುವುದು ಹಾಗೂ ಎಮ್ ಜಿ ಎನ್ ಆರ್ ಇ ಜಿ ಎ ಯೋಜನೆಗೆ ಸಂಬಂಧಪಟ್ಟ ಮೊತ್ತದ ಚಕ್ ಗಳನ್ನು ಪಿ ಡಿ ಓ ಅವರು ಚಕ್ ನ ಸಂಗಡ ಕಳುಹಿಸಿದ ಪೇ ಲಿಸ್ಟ ಪ್ರಕಾರ ಕೂಲಿಕಾರ ಉಳಿತಾಯ ಖಾತೆಗೆ ಜಮಾ ಮಾಡುವ ಹಾಗೂ ಖರ್ಚಿನ ವೋಚರಗಳನ್ನು ಪರೀಶೀಲೀಸುವುದು ಹಾಗೂ ಖಾತೆಗಳನ್ನು ಡಿಪಾಸಿಟ್ ಹಾಗೂ ಬ್ಯಾಂಕನ ಖಾತೆಗಳನ್ನು ಹೊಂದಾಣಿಕೆಗೆ ಟ್ಯಾಲಿ ಮಾಡುವ ಹಾಗೂ ಮುಂತಾದ ಕೆಲಸಗಳನ್ನು ಮಾಡುತ್ತಿದ್ದೇನು. ಗ್ರಾಹಕರಿಂದ ಅರ್ಜಿ ಪಡೆದು ಬೆಳೆ ಸಾಲವನ್ನು ಮಂಜೂರು ಮಾಡುವುದು ಮತ್ತು ಸಾಲವನ್ನು ವಸೂಲಿ ಮಾಡುವುದು. ವಾಹನವನ್ನು ಖರೀದಿಸುವವರಿಗೆ ಮತ್ತು ಸ್ವಂತ ಉದ್ಯೋಗದ ಸಲುವಾಗಿ ಹಾಗೂ ಎಫ್ ಡಿ ಮೇಲೆ ಸಾಲ ಕೊಡುವುದು ಹಾಗೂ ಹಣಕಾಸಿನ ವ್ಯವಹಾರಗಳ ಬಗ್ಗೆ ಪರೀಶೀಲಿಸುವುದು ಮತ್ತು ಪ್ರತಿ ದಿನ ಆದ ಜಮಾ ಖರ್ಚಿನ ಬಗ್ಗೆ ಬರೆಯುವುದು ಮತ್ತು ಗ್ರಾಹಕರ ಸಾಲದ ಹಣವನ್ನು ಬಡ್ಡಿ ಸಮೇತ ಬ್ಯಾಂಕಗೆ ಜಮಾ ಮಾಡಿದಾಗ ಸಾಲ ಖಾತೆಗಳಲ್ಲಿ ಜಮಾ ತೆಗೆದುಕೊಂಡಿರುವುದನ್ನು ಪರೀಶೀಲಿಸುವುದು ಹಾಗೂ ಎಲ್ಲ ಸಿಬ್ಬಂದಿಗಳ ಕರ್ತವ್ಯದ ಮೇಲೆ ಗಮನವಿಟ್ಟು ಕೆಲಸ ನಿರ್ವಹಿಸುವ ಬಗ್ಗೆ ಮಾರ್ಗದರ್ಶನ ಮಾಡುವುದು ಶಾಖಾ ವ್ಯವಸ್ಥಾಪಕರ ಮುಖ್ಯ ಕರ್ತವ್ಯ ಹಾಗೂ ಜವಾಬ್ದಾರಿ ನಮ್ಮ ಕೆಲಸ ಮಾಡುತ್ತಿದ್ದೇನು. ನಾನು ಸದರಿ ಬ್ಯಾಂಕಿನ ಬೆಳೆ ಸಾಲ ಹಾಗೂ ಇನ್ನುಳಿದ ಸಾಲದ ಖಾತೆಗಳಿಗೆ ಸಂಬಂಧಿಸಿದ ದಾಖಲೆಗಳನ್ನು ನೋಡಿದ್ದು ಜೆ ಎಮ್ ಹುರಳಿಕುಪ್ಪಿ ಇವರ ಖಾತೆಗೆ ಸಂಬಂಧಿಸಿದ ಕ್ಯೂ ನಂಬರ 65320 ರ ಜಮಾ ಸ್ಲೀಪ್ ಕಡತದಲ್ಲಿಲ್ಲದ ಕಾರಣ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಃ ಇಲ್ಲ.</u>

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು, ಕುಂದಗೋಳ.